**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಫೌಜುದಾರಿ ಪ್ರಕರಣ ಸಂಖ್ಯೆ 28/2024**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು,
ಮಂಕಿ ಪೋಲಿಸ್ ಠಾಣೆ , ಹೊನ್ನಾವರ.

-ವಿರುದ್ಧ-

ಆರೋಪಿಃ 1) ಲಕ್ಷ್ಮೀ ಕೋಂ ಗೋವಿಂದ ಹರಿಕಂತ್ರ,
ವಯಸ್ಸುಃ 51 ವರ್ಷಗಳು,
ಉದ್ಯೋಗಃ ಮೀನು ಮಾರಾಟ,
ಸಾಕೀನಃ ಹೊಸಹಿತ್ಲ, ಮಂಕಿ,
ತಾಲೂಕುಃ ಹೊನ್ನಾವರ.

2) ರೇಣುಕಾ ಯಾನೆ ಪವಿತ್ರಾ ಕೋಂ ವೆಂಕಟೇಶ ಹರಿಕಂತ್ರ,
ವಯಸ್ಸುಃ 27 ವರ್ಷಗಳು,
ಉದ್ಯೋಗಃ ಮನೆಕೆಲಸ,
ಸಾಕೀನಃ ಹೊಸಹಿತ್ಲ, ಮಂಕಿ,
ತಾಲೂಕುಃ ಹೊನ್ನಾವರ.

## ದೋಷಾರೋಪಣೆ

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನು ಹೊರೆಸುತ್ತಿದ್ದೇನೆ.

1.ಮೊದಲನೇಯದಾಗಿ ಮಂಕಿ ಪೋಲಿಸ್ ಠಾಣಾ ಸರಹದ್ದಿನ ಮಂಕಿ ಹೊಸಹಿತ್ಲದಲ್ಲಿ ಚಾಸಾ-1ಶ್ರೀವತಿ ಲಕ್ಷ್ಮೀ ಕೋಂ ಸುಕ್ರ ಹರಿಕಂತ್ರರವರ ಮಗನಾದ ಚಾಸಾ-5 ಶೇಖರ ಸುಕ್ರ ಹರಿಕಂತ್ರ ಮತ್ತು ಚಾಸಾ-6 ವಿನಾಯಕ ತಂದೆ ಮಾದೇವ ಹರಿಕಂತ್ರರವರೊಂದಿಗೆ ವಾಸವಿದ್ದ ಚಾಸಾ-1 ರವರ ತಂದೆಗೆ ಸೇರಿದ ಆಶ್ರಯ ಮನೆ ನಂ.1338 ಕ್ಕೆ ಸಂಬಂಧಿಸಿದಂತೆ ಆರೋಪಿತರಾದ ನೀವು ಚಾಸಾ-1 ರವರಿಗೆ ಮನೆ ಖಾಲಿ ಮಾಡಿ ನಿನ್ನ ಗಂಡನ ಮನೆಗೆ ಹೋಗು ಅಂತಾ ಪದೇ ಪದೇ ಹೇಳಿ ಜಗಳ ಮಾಡವುದು ಬೈಯ್ಯುವುದು ಮಾಡುತ್ತಾ ಬಂದಿದ್ದು, ಚಾಸಾ-1 ರವರು ಮನೆ ಖಾಲಿ ಮಾಡಿಲ್ಲ ಅಂತಾ ಸಿಟ್ಟಿನಲ್ಲಿ ದಿನಾಂಕಃ 20-02-2024 ರಂದು ಬೆಳಗಿನ ಜಾವ 05-45 ಗಂಟೆಗೆ ಚಾಸಾ-1 ರವರು ತನ್ನ ಮನೆಯ ಮೆಟ್ಟಿಲಿನ ಹತ್ತಿರ ಅಂಗಳದಲ್ಲಿ ಗುಡಿಸುತ್ತಿದ್ದಾಗ 1 ಮತ್ತು 2 ನೇ ಆರೋಪಿತರು ತಮ್ಮ ಸಮಾನ ಉದ್ದೇಶದಿಂದ ಮನೆಯ ಹೊರಗೆ ಬಂದು ಚಾಸಾ-1 ರವರ ಮಾನಸಿಕ ನಮ್ಮೆದಿಗೆ ಭಂಗ ಉಂಟಾಗುವ ರೀತಿಯಲ್ಲಿ "ಬೋಸ್ಡಿ ರಂಡೆ" ಅಂತಾ ಅವಾಚ್ಯ ಶಬ್ದಗಳಿಂದ ಬೈದು ಈ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಿತ ಕಲಂ 34 ರಡಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

2.ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರು ತಮ್ಮ ಸಮಾನ ಉದ್ದೇಶ ಈಡೇರಿಸುವ ನಿಟ್ಟಿನಲ್ಲಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದಾಗ ಚಾಸಾ-1 ರವರು ಏನು ಮಾತನಾಡದೇ ತನ್ನಷ್ಟಕ್ಕೆ ತಾನು ಬಗ್ಗಿ ಕಸ ಗುಡಿಸುತ್ತಿದ್ದನ್ನು ನೋಡಿ 1 ನೇ ಆರೋಪಿಯು ಮನೆಯ ಒಳಗೆ ಹೋಗಿ ಅಲ್ಯೂಮಿನಿಯಂ ಬಂಡಿಯಲ್ಲಿ ಎಣ್ಣೆಯನ್ನು ಕಾಯಿಸಿಕೊಂಡು ಮನೆ ಹೊರಗೆ ಬಂದು 2 ನೇ ಆರೋಪಿಯ ಜೊತೆಯಲ್ಲಿ ಚಾಸಾ-1 ರವರ ಮನೆಯ ಮುಂದೆ ಕರೆದುಕೊಂಡು ಹೋಗಿ ಒಮ್ಮೇಲೆ ಚಾಸಾ-1 ರವರ ಮೈಮೇಲೆ ಬಂಡಿಯಲ್ಲಿದ್ದ ಬಿಸಿ ಎಣ್ಣೆಯನ್ನು ತೋಕಿದ್ದರಿಂದ ಮುಖದ ಎಡಭಾಗ, ಎಡಭುಜ ಭಾಗದ ಎಡಕಿವಿ, ಕುತ್ತಿಗೆಯ ಎಡಭಾಗದ ಮೇಲೆ ಗಂಭೀರ ಸ್ವರೂಪದ ಗಾಯ ಪಡಿಸಿದ್ದರಿಂದ ಈ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 326 ಸಹವಾಚಿತ ಕಲಂ 34 ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

3.ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರು ತಮ್ಮ ಸಮಾನ ಉದ್ದೇಶ ಈಡೇರಿಸುವ ನಿಟ್ಟಿನಲ್ಲಿ ಚಾಸಾ-1 ರವರಿಗೆ ಮನೆ ಖಾಲಿ ಮಾಡಿಲ್ಲಾಂದರೆ "ನಿನಗೆ ಇಷ್ಟಕ್ಕೆ ಬಿಡುವುದಿಲ್ಲಾ" ಎಂದು ಜೀವ ಬೇದರಿಕೆಯನ್ನ ಹಾಕಿ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಿತ ಕಲಂ 34 ರಡಿ ಅಪರಾಧ ಎಸಗಿರುತ್ತಿ ಎನ್ನುವ ದೋಷಾರೋಪಣೆಗಳನ್ನ ಹೊರಿಸುತ್ತಿದ್ದೇನೆ.

ಮೇಲಿನ ಆಪಾದನೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಸಹಿ ಇದೆ.**

ದಿನಾಂಕಃ 04-07-2024.

**(ಶ್ರೀ ಬಿ.ಸಿ ಚಂದ್ರಶೇಖರ್)**

ಸ್ಥಳಃ ಹೊನ್ನಾವರ

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಫೌಜುದಾರಿ ಪ್ರಕರಣ ಸಂಖ್ಯೆ 28/2024**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು,
ಮಂಕಿ ಪೋಲಿಸ್ ಠಾಣೆ , ಹೊನ್ನಾವರ.

-ವಿರುದ್ಧ-

ಆರೋಪಿಃ 1) ಲಕ್ಷ್ಮೀ ಕೋಂ ಗೋವಿಂದ ಹರಿಕಂತ್ರ,
ವಯಸ್ಸುಃ 51 ವರ್ಷಗಳು,
ಉದ್ಯೋಗಃ ಮೀನು ಮಾರಾಟ,
ಸಾಕೀನಃ ಹೊಸಹಿತ್ಲ, ಮಂಕಿ,
ತಾಲೂಕುಃ ಹೊನ್ನಾವರ.

## ಆಪಾದನೆ

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(**ದೋಷಾರೋಪಣೆಯನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಆರೋಪಿಯು ನೀಡಿದ ಉತ್ತರವನ್ನ ಯಾಥವತ್ತಾಗಿ ದಾಖಲಿಸಿಕೊಳ್ಳಲಾಯಿತು.**)

**ಸಹಿ ಇದೆ.**

ದಿನಾಂಕಃ 04-07-2024. **(ಶ್ರೀ ಬಿ.ಸಿ ಚಂದ್ರಶೇಖರ್)**

ಸ್ಥಳಃ ಹೊನ್ನಾವರ **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಫೌಜುದಾರಿ ಪ್ರಕರಣ ಸಂಖ್ಯೆ 28/2024**

| | | |
|---|---|---|
| ಫಿರ್ಯಾದಿಃ | | ಸರಕಾರದ ಪರವಾಗಿ<br>ಪೋಲಿಸ್ ಉಪ-ನಿರೀಕ್ಷಕರು,<br>ಮಂಕಿ ಪೋಲಿಸ್ ಠಾಣೆ , ಹೊನ್ನಾವರ. |
| | | -ವಿರುದ್ಧ- |
| ಆರೋಪಿಃ | 2) | ರೇಣುಕಾ ಯಾನೆ ಪವಿತ್ರಾ ಕೋಂ ವೆಂಕಟೇಶ ಹರಿಕಂತ್ರ,<br>ವಯಸ್ಸುಃ 27 ವರ್ಷಗಳು,<br>ಉದ್ಯೋಗಃ ಮನೆಕೆಲಸ,<br>ಸಾಕೀನಃ ಹೊಸಹಿತ್ಲ, ಮಂಕಿ,<br>ತಾಲೂಕುಃ ಹೊನ್ನಾವರ. |

**ಆಪಾದನೆ**

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

**(ದೋಷಾರೋಪಣೆಯನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಆರೋಪಿಯು ನೀಡಿದ ಉತ್ತರವನ್ನ ಯಾಥವತ್ತಾಗಿ ದಾಖಲಿಸಿಕೊಳ್ಳಲಾಯಿತು.)**

**ಸಹಿ ಇದೆ.**

ದಿನಾಂಕಃ 04-07-2024. **(ಶ್ರೀ ಬಿ.ಸಿ ಚಂದ್ರಶೇಖರ್)**

ಸ್ಥಳಃ ಹೊನ್ನಾವರ **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**